33 Sri Neelakantaiah Son Reply awaited 16-08-91

ವಿಷಯ: ಶಾಲೆಗಳಲ್ಲಿ "ಡಿ"ಗುಂಪಿನ ನೌಕರರ ಹುದ್ದೆಗಳನ್ನು ಭರ್ತಿ ಮಾಡುವ ಬಗ್ಗೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1554 (2126)

ಶ್ರೀ ಶಿವಶೇಖರಪ್ಪಗೌಡ, ಶಿರವಾಳ (ಶಹಾಪುರ):- ಮಾನ್ಯ ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ.

ಅ ಹೈದರಾಬಾದ್ ಕರ್ನಾಟಕ ಭಾಗದಲ್ಲಿ ಪ್ರೌಢಶಾಲೆ ಹಾಗೂ ಪ್ರಾಥಮಿಕ ಶಾಲೆಗಳಲ್ಲಿ ಎಡು ಗುಂಪಿನ ನೌಕರರು ನಿವೃತ್ತರಾದ ನಂತರ ಸದರಿ ಹುದ್ದೆಗಳನ್ನು ಭರ್ತಿ ಮಾಡದಿರುವುದು ನಿಜವಲ್ಲವೆ.

ಆ ಇದರಿಂದ ಶಾಲೆಗಳಿಗೆ ತೊಂದರೆಯಾಗಿದೆಯೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೆ.

ಇ ಈಗಲಾದರೂ ಸರ್ಕಾರದವರು ಶಾಲೆಗಳಿಗೆ "ಡಿ" ಗುಂಪಿನ ನೌಕರರನ್ನು ನೇಮಕ ಮಾಡುವ ಮೂಲಕ ಮೇಲ್ಕಂಡ ಶಾಲೆಗಳಿಗಾಗುತ್ತಿರುವ ತೊಂದರೆಯನ್ನು ತಪ್ಪಿಸುವರೇ?

ಶ್ರೀ ಎಂ.ವೀರಪ್ಪ ಮೊಯಿಲಿ, (ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳಸಚಿವರು)

ಅ ಆರ್ಥಿಕ ಮಿತವ್ಯಯ ಜಾರಿಯಲ್ಲಿರುವುದರಿಂದ ಬೋದಕೇತರ ಹುದ್ದೆಗಳನ್ನು ಭರ್ತಿ ಮಾಡಲು ಅವಕಾಶವಿಲ್ಲವಾದ್ದರಿಂದ ರಾಜ್ಯದ ಯಾವುದೇ ಭಾಗದಲ್ಲಿನ ಗ್ರೂಪ್ "ಡಿ" ನೌಕರರ ಹುದ್ದೆಗಳನ್ನು ಭರ್ತಿ ಮಾಡಲು ಅವಕಾಶವಿರುವುದಿಲ್ಲ.

ಆ ಅನುಕಂಪದ ಆಧಾರದ ಮೇಲೆ ಗ್ರೂಪ್ "ಡಿ" ನೌಕರರ ಹುದ್ದೆಗಳನ್ನು ಭರ್ತಿ ಮಾಡಲಾಗುತ್ತಿರುವುದರಿಂದ ಶಾಲೆಗಳಿಗೆ ತೊಂದರೆಯಾಗಿಲ್ಲ.

ಇ (2)ರಲ್ಲಿನ ಉತ್ತರದಿಂದಾಗಿ ಉದ್ಭವಿಸುವುದಿಲ್ಲ.

ಛೇರ್ಮನ್:- ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳ ಪಟ್ಟಿಯನ್ನು ಮಂಡಿಸಲಾಯಿತು.

334ನೇ ನಿಯಮದ ಮೇರೆಗೆ.

ವಿಷಯ: ಶಿವಮೊಗ್ಗ ಜಿಲ್ಲೆಯ ಶಿಕಾರಿಪುರ ತಾಲ್ಲೂಕಿನ ಹಳ್ಳಿಗಳಿಗೆ ಏತ ನೀರಾವರಿ ಸೌಲಭ್ಯಗಳನ್ನು ಒದಗಿಸುವ ಬಗ್ಗೆ.

ಶ್ರೀ ಟಿ. ಜಿ. ಜಯಚಂದ್ರ (ಕಳ್ಳಂಬೆಳ್ಳ):- ಮಾನ್ಯ ಅಧ್ಯಕ್ಷರೇ, ಶಿವಮೊಗ್ಗ ಜಿಲ್ಲೆಯ ಶಿಕಾರಿಪುರ ತಾಲ್ಲೂಕಿನ ಅಂಬಾಕೊಪ್ಪ, ಕುದರೆ ಹೊಸೂರು, ಸುರಗಿಹಳ್ಳಿ,ಹಾರ್ನಳ್ಳಿ ಮತ್ತು ತಂಬಿನ ಕಟ್ಟೆ ಗ್ರಾಮಸ್ಥರು ಸುಮಾರು 10-15 ವರ್ಷಗಳಿಂದ ಬರಗಾಲ ಅನುಭವಿಸುತ್ತಾ ಬಂದಿರುತ್ತಾರೆ. ಈ ಗ್ರಾಮಗಳ ಪಕ್ಕದಲ್ಲಿಯೇ ಹರಿಯುವ ಕುಮದ್ವತಿ ನದಿಗೆ ಏತ ನೀರಾವರಿ ಮಾಡಿ ಹತ್ತಿರವಿರುವ ಕೊಪ್ಪದ ಕೆರೆಗೆ ನೀರನ್ನು ತುಂಬುವಂತೆ ಮಾಡಿದಲ್ಲಿ ಬೇಸಿಗೆಯಲ್ಲೂ ಸಹ ಮೇಲ್ಕಂಡ 5 ಗ್ರಾಮಗಳ ಸಾವಿರಾರು ಎಕರೆ ಜಮೀನು ನೀರಾವರಿಯಾಗುತ್ತದೆ. ಇವರು ಅನೇಕ ಬಾರಿ ಮನವಿಯನ್ನು ಸಲ್ಲಿಸಿದ್ದರೂ ಸಹ ಇದರ ಬಗ್ಗೆ ಸರ್ಕಾರವು ಯಾವುದೇ ಕ್ರಮ ಕೈಗೊಂಡಿರುವುದಿಲ್ಲ. ಈ ದಿಸೆಯಲ್ಲಿ ಸದರಿ ಹಳ್ಳಿಗಳ ಜನತೆಯು ಮುಷ್ಕರ ಹೂಡಿರುವುದನ್ನು ಸದನದ ಗಮನಕ್ಕೆ ಹಾಗೂ ಸಂಬಂಧಪಟ್ಟ ಮಂತ್ರಿಗಳ ಗಮನಕ್ಕೆ ತರಬಯಸುತ್ತೇನೆ.

ಶ್ರೀ ಕೆ.ಎಸ್.ಮಲ್ಲಿಕಾರ್ಜುನ ಪ್ರಸನ್ನ:- (ಸಣ್ಣ ನೀರಾವರಿ ರಾಜ್ಯಸಚಿವರು) ಮಾನ್ಯ ಅಧ್ಯಕ್ಷರೇ, ಈ ವಿಚಾರದಲ್ಲಿ ನಾನು ಮಾನ್ಯ ಶಾಸಕರ ಹತ್ತಿರ ಪ್ರತ್ಯೇಕವಾಗಿ ಮಾತನಾಡಿ ಏನು ಸಮಸ್ಯೆ ಇದೆ ಅದನ್ನು ಬಗೆಹರಿಸುತ್ತೇನೆನ್ನುವ ಮಾತನ್ನು ಹೇಳುತ್ತೇನೆ.

ವಿಷಯ:- ಮಲ್ಲೇಶ್ವರ, ಯಶವಂತಪುರ, ರಾಜಾಜಿನಗರಗಳಿಂದ ಶಿವಾಜಿನಗರಕ್ಕೆ ಹೋಗುವ ಬಸ್ಸುಗಳ ಮಾರ್ಗವನ್ನು ಬದಲಿಸುವ ಬಗ್ಗೆ.

ಶ್ರೀ ರಾಮಲಿಂಗರೆಡ್ಡಿ (ಜಯನಗರ):- ಮಾನ್ಯ ಅಧ್ಯಕ್ಷರೇ ಈಗ ಮಲ್ಲೇಶ್ವರ, ಯಶವಂತಪುರ,

ರಾಜಾಜಿನಗರ, ಜಯನಗರ ಮುಂತಾದ ಪ್ರದೇಶಗಳಿಂದ ಶಿವಾಜಿನಗರಕ್ಕೆ ಹೋಗತಕ್ಕ ಬಸ್ಸುಗಳು ಬೆಳಿಗ್ಗೆ ಆರ್.ಸಿ.ಕಾಲೇಜು, ರಾಜಭವನ ಮಾರ್ಗವಾಗಿ ಹೋಗುತ್ತಿವೆ. ಕಛೇರಿ ನೌಕರರಿಗೆ ಅನುಕೂಲವಾಗಲು ಹಾಗೂ ರಾಜಭವನ ರಸ್ತೆಯಲ್ಲಿ ಸಂಚಾರ ದಟ್ಟಣೆ ಕಡಿಮೆ ಮಾಡಲು, ಈ ಮೇಲ್ಕಂಡ ಬಸ್ಸುಗಳನ್ನು ವಿಧಾನಸೌಧ, ಹೈಕೋರ್ಟ್ ಮಾರ್ಗವಾಗಿ ಓಡಿಸಬೇಕು. ಈ ಬಗ್ಗೆ ಕೂಡಲೇ ಕ್ರಮ ಕೈಗೊಳ್ಳಬೇಕೆಂದು ಸನ್ಮಾನ್ಯ ಸಾರಿಗೆ ಸಚಿವರನ್ನು ಕೋರುತ್ತೇನೆ.

SRI AZEEZ SAIT (MINISTER FOR TRANSPORT):- Sir, the B.T.S. Services from Shivajinagar to Malleswaram, Rajajinagar and Yeshdwanthapura are being operated via Institute of Engineeers, Vidhana Soudha, Telephone Exchange, Basaveswara Circle and Malleswaram, as the Police Authorities have imposed one way traffic movement on Rajabhavan Road during onward journey. On the return journey, however the services from Yeshwantpura, Rajajinagar and Malleswaram to Shivajinagar are being operated via swasthik, Basaveswara Circle, Rajabhavan Road and G.P.O. as there is no traffic restriction.

The Stage pattern is as follows:-

<u>From Shivajinagar to Malleswaram:</u>

Shivajinagar	1
Institute of Engineers	2
Telephone Exchange	3
Swasthik	4
Malleswaram	5

<u>From Malleswaram to Shivajinagar:</u>

Malleswaram	1
Swasthik	2
G.P.O	3
Shivajinagar	4

If the services from Rajajinagar, Yeshwanthpur and Malleswaram to Shivajinagar are made to operate via Vidhana Soudha, the passengers bound to G.P.O., Akashwani and Shivajinagar have to pay for one additional stage as there is increase of one stage on the common portion of the route between Malleswaram and Shivajinagar. As such,it is not feasible to operate the services via Vidhana Soudha. However, the commuters from Rajajinagar, Yeshwanthpur and Malleswaram to Vidhana Soudha, High Court and surrounding places can avail the high

frequency services operated from Rajajinagar, Malleswaram, Basaveshwara Nagar, Yeshwanthpur, Mathikere,etc., to K.R.Market, Jayanagar, Banashankari,Madiwala, Gandhi Bazar, Srinagar,J.P.Nagar, etc., which are operating via Vidhana Soudha and K.R.Circle.

ಆ ಕಡೆ ಸರ್ಕಲ್‌ನಲ್ಲಿ ಬಸ್ ನಿಲ್ಲಿಸುತ್ತಾರೆ. ಅಲ್ಲಿಂದ ವಿಧಾನ ಸೌಧ ಏನೂ ದೂರ ಇಲ್ಲ ಅಲ್ಲಿಂದ ವಿಧಾನ ಸೌಧ ಮಾರ್ಗ ಹೋದರೆ ಪ್ರಯಾಣಿಕರು ಇನ್ನೂ ಹೆಚ್ಚಿಗೆ ಹಣವನ್ನು ಕೊಡಬೇಕಾಗುತ್ತದೆ.

ವಿಷಯ:- ರಾಜ್ಯ ರಸ್ತೆ ಸಾರಿಗೆ ಬಸ್ ದರಗಳನ್ನು ಕಡಿಮೆ ಮಾಡುವ ಬಗ್ಗೆ.

ಶ್ರೀ ಜಿ.ಎಸ್.ಆಚಾರ್ (ಬೈಂದೂರು):- ಮಾನ್ಯ ಅಧ್ಯಕ್ಷರೇ, ಕರ್ನಾಟಕದ ಸಾರಿಗೆ ನಿಗಮದ ಬಸ್ಸುಗಳು ಮೂರು ಮಾದರಿ. ತಮಿಳ್ನಾಡಿನಲ್ಲಿ ಅವುಗಳೆಲ್ಲಾ ಸುವಿಹಾರಿ. ಆದರೂ ಅಲ್ಲಿ ಪ್ರಯಾಣ ಶುಲ್ಕ ಕಿಲೋಮೀಟರಿಗೆ ಹನ್ನೊಂದು ಪೈಸೆ. ನಮ್ಮಲ್ಲಿ ಏರಿ ಏರಿ ಈಗ ಆಗಿದೆ 18ಪೈಸೆ. ಕೇರಳ ಆಂಧ್ರಪ್ರದೇಶದಲ್ಲಿ ಸಹ ಶುಲ್ಕ ಕಡಿಮೆ, ಕರ್ನಾಟಕಕ್ಕೆ ಮಾತ್ರ ಅತ್ಯಂತ ಅಧಿಕ ಧರ ವಿಧಿಸಿದ ಹಿರಿಮೆ. ಇಷ್ಟಾದರೂ ಸಾರಿಗೆ ಸಂಸ್ಥೆಯಲ್ಲಿ ಸೋರಿಕೆ ಎಂಬ ಆರೋಪ, ಇದರಿಂದಾಗಿ ಜನಕ್ಕೆಲ್ಲ ಪರಿತಾಪ. ಪಯಣಿಗರ ಪರವಾಗಿ ನಾನು ಕೇಳುವುದಿಷ್ಟೆ, -ಆದೀತೇ ಶುಲ್ಕ ಇಳಿತ, ಖಾಸಗೀಕರಣ ಸಹಿತ ಅಥವಾ ಸಾಧಿಸಲಾಗುವುದೇ ಸಂಸ್ಥೆಯ ಒಳಿತ?

SRI AZEEZ SAIT (Minister for Transport):- Sir, I would like to make the following statement.

The KSRTC is operating Four types of Stage Carriages Viz. Ordinary, Express, Semi-Luxury and Super Delux. Tamilnadu is operating three types fiz. Ordinary, Express and Luxury.

The Prevailing bus fares in the neighbouring States Transport Undertakings are as under:-

Sl. No.	State Transport Undertakings	Ordinary Ps./Km.	Express Ps./Km.	Semi-Luxury Ps./Km.	Luxury Ps./ Km.
1	Karnataka	14.22	15.79	18.93	22.80
2	Maharashtra	18.33	20.00	23.30	30.80
3	Kerala	14.00	20.00	23.00	25.00
	Plains Ghats	17.50	25.00	28.70	31.20
4	Andhra Pradesh	13.00	15.75	18.90	21.00
5	Tamilnadu	12.50	14.50	-	14.50

Luggage Surcharge is 25 ps. per passanger in Ordinary, buses, 50 ps. to 200 ps. per passenger in Express Services depending upon the distance travelled.